Doc-33
T.P-2

(1)

51st Year of Publication ★ SATYAVADI Daily, MYSORE 4

Reg No B G 155 ೨೮ 15-7-1966

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ

ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೆಯೆಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 6



Space available

For Permanent Advertisement

ಸ್ಥಾಪಕರು : ತರುಣ ಬಸ್ತೀವಾನ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಪಾಕಿಸ್ತಾನ ಅಧ್ಯಕ್ಷ ಅಯ್ಯೂಬರ ಆಭ್ಯರ್ಥಿ

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವನ್ನು ಜುಲೈನಲ್ಲಿ ನೆರೆವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮಿತ್ತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶೆನ್ವಾ ರವರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ನೇಪ್ರದಾನಿ ಡಾ|| ಎಂ.ಸಿ ಮೋದಿಯನವರು ಡಾ || ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಕೋ) ಯನವರು ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನಸೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ, ವಿನಂತಿಸಿ, ಈಡೇರುವೆಂದು ಆಶಿಸಿ, ಕೃತಜ್ಞತಾಪೂರ್ವಕವಂದಿಸುತ್ತೇನೆ.

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

ಮೈಸೂರಿಗೆ ಕೇಂದ್ರದ ನೆರವು

ಬೆಂಗಳೂರು— ರಸಾಯನಿಕ ಗೊಬ್ಬರ ಕೊಳ್ಳಲು ಮೈಸೂರಿಗೆ ಕೇಂದ್ರವು ರೂ. 7 ಕೋಟಿ ಮಂಜೂರ್ಮಾಡಲು ಒಪ್ಪಿದೆಯೆಂದೂ ಈಗ ರಾಜ್ಯದಲ್ಲಿ ರೂ. 14 ಕೋಟಿ ರಸಾಯನಿಕ ಗೊಬ್ಬರ ಇದೆಯೆಂದೂ ಮುಖ್ಯ ಮಂತ್ರಿ ಶ್ರೀ ವೀರೇಂದ್ರ ಪಾಟೀಲರು ಹೇಳಿದರು.

ಪ್ರತಿ ರೂಪು ದಹನ

ಬೆಂಗಳೂರು— ಗಡಿ ಭಾಗಗಳ ವಿಚಾರದಲ್ಲಿ ಆಂಧ್ರ ಮುಖ್ಯಮಂತ್ರಿಯವರು ಕೊಟ್ಟಿದ್ದ ಹೇಳಿಕೆ ಪ್ರತಿಭಟಿಸಿ, ಅವರ ಪ್ರತಿರೂಪನ್ನು ಕನ್ನಡ ಚಳವಳಿಗಾರರ ಒಂದು ಗುಂಪು ನಿನ್ನೆ ಸುಟ್ಟಿತು.

★

ಪಕ್ಷಾಂತರ

ನವದೆಹಲಿ— ಮುಂತ್ರಿಮಂಡಲವು ಚಿಕ್ಕ ಕ್ಕದಾಗಿದ್ದರಿ, ಅಧಿಕಾರ ಲಾಲಸೆ ಆಡ್ಡಿ ಗೊಂಡು, ಪಕ್ಷಾಂತರ ಕಡಮೆಯಾಗುವುದೆಂದು ಅಭಿಪ್ರಾಯಪಡಲಾಗಿದೆ.

●

ಪ್ರವಾಸ ಸ್ಥಗಿತ

ನವದೆಹಲಿ— ನಾಲ್ಕನೇ ಯೋಜನೆಯಲ್ಲಿ ರೂ. 52 ಕೋಟಿ ವ್ಯಯದ ಯೋಜನೆಯನ್ನು ಕೇಂದ್ರ ಪ್ರವಾಸಾಇಲಾಖೆ ಯೋಚಿಸಿದೆ — ಇತಕ್ಕೆ ಇತರ ಕಡೆಗಳಿಂದ ಅಷ್ಟು ಹಣ ಬಿದ್ದು ಒಟ್ಟು ರೂ. 104 ಕೋಟಿ ವ್ಯಯವಾಗುವುದು — ಮತ್ತು ಇದರಿಂದ ಯೋಜನೆ ಕಾಲದಲ್ಲಿ ಪ್ರವಾಸಗಳಿಂದ ರೂ. 262 ಕೋಟಿ ವಿದೇಶೀ ವಿನಿಮಯ ನಿರೀಕ್ಷಿಸಲಾಗಿದೆ.

★

ಜಾಕ್‌ಪಾಟ್

ಬೆಂಗಳೂರು— ನಿನ್ನೆ ನಡೆದ ಕುದುರೆ ಜೂಜಿನಲ್ಲಿಯ ಜಾಕ್‌ಪಾಟ್ ಪೂಲಿನಲ್ಲಿ ಒಂದು ಟಿಕೀಟಿಗೆ ರೂ. 256250 ದೊರೆಯಿತು — ಟ್ರಿಬಲ್ ಈವೆಂಟಿನಲ್ಲಿ 13 ಟಿಕೀಟುಗಳಿಗೆ ತಲಾ ರೂ. 6887 ಸಿಕ್ಕಿತು.

ಶನಿವಾರ ನಡೆದ ಕುದುರೆ ಜೂಜಿನಲ್ಲಿ ಜಾಕ್‌ಪಾಟ್ ಪೂಲಿನಲ್ಲಿ 2 ಟಿಕೀಟುಗಳಿಗೆ ತಲಾ ರೂ. 314899 ದೊರೆಯಿತು.

— ರಾಜರ ಸಮ್ಮೇಳನ

ನವದೆಹಲಿ— ರಾಜರಿಗೆ ದೊರೆಯುತ್ತಿರುವ ರಾಜಧನ ಮತ್ತಿತರ ಠಿಯಾಪುಟಿತಿಗಳನ್ನು ರದ್ದುಪಡಿಸಬೇಕೆಂಬ ಸರ್ಕಾರದ ಈಚಿನ ನಿರ್ಧಾರದ ಬಗ್ಗೆ ಚರ್ಚಿಸಲು ರಾಜರು ಬೊಂಬಾಯಿನಲ್ಲಿ ತಾ 18 ರಂದು ಸೇರಲಿದುವರು.

★

ಬಹು ದೊಡ್ಡ ಗಾಂಧೀಜಿ ಸ್ಮಾರಕ

ಬೊಂಬಾಯಿ— ಮದನ ಕಾಮು ರಸ್ತೆ ಎದುರು ಸಮುದ್ರದಲ್ಲಿ ಎತ್ತರ ಪೀಠದ ಮೇಲೆ ಮಹಾತ್ಮಾ ಗಾಂಧಿಯವರ ಪ್ರತಿಮೆ ನಿರ್ಮಿಸಲು ನಿರ್ಧರಿಸಲಾಗಿದೆ — ಇದರ ಎಲ್ಲಾ ಕಾರ್ಯಕ್ಕೂ ರೂ. 10 ಲೀಳುವುದು

★

ಆಂಧ್ರಕ್ಕೂ ದುರಾಶೆ

ಹೈದರಾಬಾದು— ಆಂಧ್ರ—ಮೈಸೂರು ಗಡಿ ನ್ಯಾಯ್ಯ ಬಗ್ಗೆ ಕೇಂದ್ರ ನಿರ್ಧರಿಸಬೇಕೆಂದೂ ಆಂಧ್ರಪ್ರದೇಶ ಗಡಿ ಸಮಿತಿ ನಿರ್ಣಯಿಸಿದೆ - ಮೈಸೂರು ರಾಜ್ಯದಲ್ಲಿಯ ತೆಲಗು ಮಾತನಾಡುವ ಭಾಗಗಳು ಆಂಧ್ರಕ್ಕೆ ಸೇರಿಸಬೇಕಂತೆ !

★

ಭಿಕ್ಷಕರ ಕೇಳಿಕೆ

ಷಿಲಾಂಗು— ಪೂರ್ವ ಪಾಕಿಸ್ತಾನದಲ್ಲಿಯ ಭಿಕ್ಷಕರು ಪಾಕಿಸ್ತಾನದಲ್ಲಿ ನಡೆಸಿದ ಸಮ್ಮೇಳನದಲ್ಲಿ ಕನಿಷ್ಟ 15 ಪೈಸೆ ಭಿಕ್ಷ ನೀಡಬೇಕೆಂದು ನಿರ್ಣಯಿಸಿದರು.

★

ಮುಷ್ಕರಕ್ಕೆ ಸಿದ್ಧತೆ

ನವದೆಹಲಿ— ಕೇಂದ್ರ ಸರಕಾರಿ ನೌಕರರು ಮತ್ತು ಕೆಲಸಗಾರರು, ಕರಿ ಕೊಟ್ಟಾಗ ಮುಷ್ಕರಿಸಲು ಸಿದ್ಧ ವಿರಬೇಕೆಂದು ಸಂಘ ಎಚ್ಚರಿಸಿದೆ.

ಅಯೂಬರರ ಆಭ್ಯರ್ಥಿ

ನವದೆಹಲಿ— ಲಾಹೋರಿನ ಮುಸ್ಲಿಂ ಲೀಗು ಕೌನ್ಸಿಲ್ಲಿನಲ್ಲಿ ಅಧ್ಯಕ್ಷ ಅಯೂಬರು ಮಾಡಿದ ಭಾಷಣದಲ್ಲಿ— ಭಾರತವು ಮಾಡಿಕೊಳ್ಳುತ್ತಿರುವ ಆಗಾಧ ಯುದ್ಧ ಸಿದ್ಧತೆ ಎದುರಿಸಲು, ತಮ್ಮ ಸಕಕಾಲವು ಭಾರಿ ಶಸ್ತ್ರಾಸ್ತ್ರ ಸೈನ್ಯವನ್ನು ಸಿದ್ಧವಾಗಿಟ್ಟಿರುವೆಂದು ಹೇಳಿದರು — ಭಾರತವು ಯುಕ್ತ ಸಿದ್ಧತೆಗೆ ರೂ. 1600 ಕೋಟಿ ಖರ್ಚು ಮಾಡುತ್ತಿರುವೆಂದೂ, ಪಾಕಿಸ್ತಾನವು ಅಪಾಯ ಪರಿಸ್ಥಿತಿಯಲ್ಲಿರುವುದೆಂದೂ ಹೇಳಿದರು.

ಕಟ್ಟಾಟಿವೂ ದ್ವೀಪ

ಕೊಲಂಬೊ— ಭಾರತ-ಸಿಲೋನು ನಡುವ್ಯೆ ಇರುವ ಕಟ್ಟಾಟಿವು ದ್ವೀಪವು ಸಿಲೋನಿಗೆ ಸೇರಿದಂತೆ ಸಿಲೋನ್ ಸರ್ವೇಜನರಲ್ ಪ್ರಕಟಿಸಿರುವ ಸಿಲೋನು ಭೂಪಠದಲ್ಲಿ ಕಾಣಿಸಲಾಗಿದೆ.

ಸಂಸ್ಕೃತಕ್ಕೆ ಸ್ಥಾನ

ಬೆಂಗಳೂರು— ರಾಜ್ಯಾಂಗದ 8 ನೇ ಷೆಡ್ಯೂಲಿನಲ್ಲಿ ಹೇಳಲ್ಪಟ್ಟಿರುವ ಭಾಷೆಗಳಲ್ಲಿ ಸಂಸ್ಕೃತವೂ ಒಂದಾಗಬೇಕೆಂದು ಗವರ್ನರ್ ಶ್ರೀ ಪಠಕ್ ಸಂಸ್ಕೃತ ಕವಿ ಸಮ್ಮೇಳನವನ್ನುದ್ಘಾಟಿಸುತ್ತಾ ಹೇಳಿದರು.

ನಾಗಾ ದೌರ್ಜನ್ಯರು

ಕೊಹಿಮಾ— ಕಡೇಪಕ್ಷ 3000 ನಾಗಾ ದೌರ್ಜನ್ಯರು ಚೀನಾಕ್ಕೆ ತರಬೇತಿಗೂ, ಶಸ್ತ್ರಾಸ್ತ್ರ ಪಡೆಯಲೂ ಹೋಗಿರುವರೆಂದು ಹೇಳಲಾಗಿದೆ.

ಹಿಂದೂಗಳ ಆಚಾರ

ಸಂಗ್ರಾಹಕರು— 'ಶಾಸ್ತ್ರಧರ್ಮನಿರತ" ಅನಂತನರಸಿಂಹಯ್ಯಂಗಾರ್

ವಿಷಯ ಪ್ರವೇಶ - ಮಾನವನು ಇಹಲೋಕದಲ್ಲಿ ಇರುವಷ್ಟರಿಗೆ ನೆಮ್ಮದಿಯಿಂದ ಇರಬೇಕಾದರೆ, ಮನಶ್ಶಾಂತಿ, ಜೀವನೋಪಾಯಕ್ಕೆ ಬೇಕಾದ ಆರ್ಥಿಕ ಅನುಕೂಲತೆ, ಪ್ರಕೃತಿಜನ್ಯವಾದ ಇಂದ್ರಿಯ ಭೋಗ, ಇವು ಮೂರು ಇರಬೇಕು. ಇದನ್ನೇ ಧರ್ಮ, ಅರ್ಥ, ಕಾಮಗಳೆಂದು ಶಾಸ್ತ್ರಗಳು ಹೇಳುತ್ತವೆ. ಸಾಲ್ಕನೆಯ ಪುರುಷಾರ್ಥವಾದ ಮೋಕ್ಷವು ಈ ಜನ್ಮ ಕಳೆದನಂತರ ಪರಲೋಕದಲ್ಲಿ ದೊರೆಯಬೇಕಾಗಿರುವುದು.

ಈ ಮೂರು ಪುರುಷಾರ್ಥಗಳೂ ಒಂದು ಸಮಸ್ಥಿತಿಯಲ್ಲಿ ಅನುಭವಿಸಲ್ಪಟ್ಟಲ್ಲಿ ಮನುಷ್ಯನಿಗೆ ಗೌರವವೂ, ನೆಮ್ಮದಿಯೂ ದೊರೆಯುತ್ತದೆ. ಅದು ಬಿಟ್ಟು ಒಂದನ್ನು ತಾತ್ಸಾರಮಾಡಿ, ಮತ್ತೊಂದಕ್ಕೆ ಹೆಚ್ಚು ಆಸೆಪಟ್ಟರೆ, ತೊಂದರೆಯನ್ನು ಅನುಭವಿಸಬೇಕಾಗುತ್ತದೆ. ಆದರೆ ನಮ್ಮ ಇಂದಿಯುಗಳಾದರೋ ನಮ್ಮ ಸ್ವಾಧೀನದಲ್ಲಿರುವುದಿಲ್ಲ. ಜೂಜಾಡುವುದರಲ್ಲೇ ಆಸಕ್ತನಾಗಿರುವ ಮನುಷ್ಯನಿಗೆ ಘಂಟೆಗಟ್ಟಲೆ ಧರ್ಮಬೋಧನೆ ಮಾಡಿ ವಾಲ್ಮೀಕಿ ರಾಮಾಯಣವನ್ನು ಪಠಿಸುವಂತೆ ಹೇಳಿ, ಆ ಗ್ರಂಥವನ್ನು ಕೊಟ್ಟಲ್ಲಿ,ಅವನು ಒಂದು ಸಾಲನ್ನೂ ಓದಲಾರ : ಅವನ ಮನಸ್ಸೆಲ್ಲಾ ಜೂಜಿನಕಟ್ಟೆಯಲ್ಲೇ ಇರುತ್ತೆ. ಇಂಥೀತಿ ನ್ಯಭೆಚಾರಿಯಾದ ಮನುಷ್ಯನನ್ನು ಸರಿಯಾದ ಮಾರ್ಗಕ್ಕೆ ತರಬೇಕಾದರೆ, ಅವನ ಇಂದ್ರಿಯಗಳು ಬಲಹೀನವಾದನಂತರ ಮಾತ್ರವೇ ಸಾಧ್ಯ.

ಆದುದರಿಂದಲೇ ಪ್ರಾಚೀನ ಋಷಿಗಳು ಇಂದ್ರಿಯನಿಗ್ರಹ ಮಾಡಬಲ್ಲ, ದುರ್ವ್ಯಸನಗಳಿಗೆ ಹೋಗದಂತೆ ತಡೆಯಬಲ್ಲ ಕೆಲವು ಮಾರ್ಗಗಳನ್ನು ಬೋಧಿಸಿರುತ್ತಾರೆ. ಇವುಗಳನ್ನು ಬಾಲ್ಯದಿಂದಲೇ ಕಲಿತು ಅಭ್ಯಾಸ ಮಾಡಿರಬೇಕು. ಏಕೆಂದರೆ ಮಾನವನು ಒಂದಾವರ್ತಿ ದುರ್ವ್ಯಸನಗಳಿಗೆ ಒಳಗಾದನೆಂದರೆ ಅದರಿಂದ ಬಿಡುಗಡೆ ಹೊಂದುವುದು ಸುಲಭಸಾಧ್ಯವಲ್ಲ.

Respectfully dedicated
To The Director
of Publicity Information
& Tourism
Hon'ble Govt. of Mysore
★

ಮೈಸೂರು ನಗರದ ಪತ್ರಿಕೆಗಳ ಸಂಪಾದಕರು ಮತ್ತು ಪ್ರಕಾಶಕರೂ ಹಿಂದೊಮ್ಮೆ ನಡೆಸಿದ ಸಭೆಯಲ್ಲಿ ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟ ಠರಾವುಗಳಲ್ಲಿ

.... ಇದೂ ಒಂದು ....

ಮೈಸೂರು ರಾಜ್ಯ ಸರಕಾರವು ಪತ್ರಿಕೆಗಳಿಗೆ ಜಾಹಿರಾತು ಹಂಚುವಿಕೆಯಲ್ಲಿ ಅನುಸರಿಸುತ್ತಿರುವ ಈಗಿನ ವಿಧಾನ ಸಮರ್ಪಕ ರೀತಿಯಲ್ಲಿ ಇಲ್ಲದಿರುವುದರಿಂದ, ಜಾಹಿರಾತು ವಿಷಯದ ಸ್ಥಳೀಯ ಪ್ರಾಮುಖ್ಯತೆ ಅನುಸರಿಸಿ ಎಲ್ಲ ಸಣ್ಣ ಪತ್ರಿಕೆಗಳಿಗೂ ಪ್ರಮಾಣಾನುಸಾರವಾಗಿ ನಿಷ್ಪಕ್ಷಪಾತ ರೀತಿಯಿಂದ ಜಾಹಿರಾತು ವಿತರಣೆ ಮಾಡಬೇಕೆಂದು ಈ ಸಭೆ ರಾಜ್ಯ ಸರಕಾರವನ್ನು ಕೋರುತ್ತದೆ.

ಪುಡ'ಲಾಂಡ್ ಜನಭರಿತ 3 ನೇ ವಾರ
ಅಮೋಘ-ಆರಂಭ
— ಮನಮೋಹಕ ಈಸ್ಮನ್ ಕಲರ್ ಹಿಂದಿ ಚಿತ್ರ —
Jhuk Gaya Aasman
ಜುಕ್ ಗಯಾ ಆಸ್ಮಾನ್
ಪಾತ್ರ — ರಾಜೇಂದ್ರಕುಮಾರ್, ಸೈರಾಬಾನು, ಪ್ರೇಂ ಛೋಪ್ರ, ರಾಜೇಂದ್ರನಾಥ್
ಸಂಗೀತ— ಶಂಕರ್ ಜೈಕಿಷನ್ [ದಿನ ೩ ಪ್ರದರ್ಶನಗಳು]

ಆಪೇರ— ಅಮೋಘ 2 ನೇ ವಾರ
ಚಿತ್ತಾಕರ್ಷಕ ಕನ್ನಡ ಚಿತ್ರ
ನಮ್ಮ ಊರು
ಪಾತ್ರ : ಉದಯ ಕುಮಾರ್ ಅಶ್ವತ್ಥ್ ಬಾಲಕೃಷ್ಣ ಕೃಷ್ಣಕುಮಾರಿ

Help The Goraksha
ಗೋರಕ್ಷಣೆಗೆ ಜೊಂಬಲ ನೀಡಿ
ಶ್ರೀದ್ವಾರಕಾ ಜಗದ್ಗುರು ಮಹಾರಾಜ್ವಿಜಿಗಳವರು ಶ್ರೀ ಹೃಂಗೇರಿ ಜಗದ್ಗುರು ಮಹಾರಾಜ್ವಿಜಿಗಳವರ ಆದೇಶ ಅನುಸ್ಪಷ್ಟ ಕೃಪೆಯಾಗಿದೆ
ಕನ್ನಡನಾಡಿನಲ್ಲಿ ಗೋರಕ್ಷಣೆ ಪ್ರಚಾರದಲ್ಲಿ, ತಾಲೂಕಾಹಾಂ, ಪಟ್ಟಣಕ್ಕೆದ್ದ, ಎಚಾಕಗಳ ವಿಶೇಷ ಪ್ರಚಾರ ಪಾಸಪತ್ರಿಕೆ ; ಎಕ್ಕರ್ಚಿಕ ಚಂದಾ 50 ಪೈಸೆ
— ಗೋರಕ್ಷಣೆ ವ್ಯಷನಾಕ್ಷದಾಂ ವಿನಂತಿ —
ಗೋರಕ್ಷಣೆಗೆ ಲೇಖನಗಳನ್ನೂ ಪ್ರೋತ್ಸಾಹ ಧನವನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು
ಚಂದಾಹಣವಿದೆ ಕಳಿಸಿರುವವರು ಇನ್ನಷ್ಟು ಚಂದಾ ಪಾವತಿಮಾಡಬೇಕಾಗಿ ವಿನಂತಿ
ಡಾ|| ಪಿ ಎಸ್ ನಾರಾಯಣ್, ಶ್ರೀ ಪಿಎಸ್ ವಿಶ್ವನಾಥ್ ಜಯನಗರ, ಬೆಂಗಳೂರು
ಶ್ರೀ ಬಿ ಜಿ. ಶಾಸ್ತ್ರಿಗಳು, 1030 ವಿದ್ಯಾರಣ್ಯಪುರಂ, ಮೈಸೂರು
ಶ್ರೀ ಅನಂತನರಸಿಂಹಯ್ಯಂಗಾರ್, ಶಾಸ್ತ್ರಧರ್ಮಪ್ರಚಾರಸಭಾ, ಹೊಂಗನೂರು
ಗೋರಕ್ಷಣ ಆಫೀಸು ಸತ್ಯವಾದಿಪ್ರೆಸ್ ಚಾಮುಂರಾಜ್ಪುರಂ ಮೈಸೂರು 4
ವಿಳಾಸ — ಗೋರಕ್ಷಣ ಆಫೀಸು 1067 ಚಾಮರಾಜಪುರಂ, ಮೈಸೂರು

Cow Slaughter should be banned Immediately
.....
ಗೋವಧೆ ಕೂಡಲೆ ನಿಷೇಧವಾಗಲಿ

Protect the Cow
★
ಗೋರಕ್ಷಣೆ ಮತ್ತು ಪ್ರಾಣದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

Edited, Printed & Published by Dharmapracharo Nirato
M S Krishna Rao (Proprietor) at the Satyavadi Press
Chamarajapuram, Mysore 4